ನವರತ್ನ ಸರ, ಹಾರ, ಉಂಗುರ, ನೆಕ್ಲೇಸ್, ಬಳೆ, ಓಲೆ... ಹೀಗೆ ಎಲ್ಲ ರೀತಿಯ ಆಭರಣಗಳೂ ಸಾಂಪ್ರದಾಯಿಕ ಹಾಗೂ ಫ್ಯಾಷನೆಬಲ್ ಆಗಿರುತ್ತವೆ. ಧರಿಸಿಕೊಳ್ಳಲು ಹಗುರ ಹಾಗೂ ಸಖತ್ ಲುಕ್ ಕೊಡುವಂಥದ್ದು.

■ ಚಿತ್ರ- ಬರಹ: **ಕೃಷ್ಣವೇಣಿ ಪ್ರಸಾದ್ ಮುಳಿಯ**



# ಆಹಾ.. ನವರತ್ನ ಒಡವೆ..!



ಬಾಳು ಬಂಗಾರವಾಗಬೇಕು, ಬದುಕು ಶೃಂಗಾರವಾಗಬೇಕು– ಇದು ನಾರಿಯರ ಹೃದಯದಲ್ಲಿ ಚಿಗುರೊಡೆಯುವ ಮಧುರ ಸುಂದರ ಮನಸ್ಸಿನ ಭಾವುಕ ಮಿಡಿತಗಳು. ಜೀವನ ನವರಸ ಭರಿತವಾಗಿರಬೇಕು. ಏಕೆಂದರೆ ನಗು, ಸಂತೋಷದ ಅನುಭೂತಿಯಾಗಬೇಕಾದರೆ ಅಳು, ಕಹಿ, ಕಷ್ಟಗಳ ಅರಿವಿದ್ದಾಗ ಮಾತ್ರ ಸಾಧ್ಯ. ಸದಾ ನಗು, ಸಂತೋಷ ಅದು ಸುಖವಲ್ಲ, ಅದರಿಂದ ಹೆಚ್ಚು ಸುಖಕ್ಕೆ ಹೋಗಬೇಕೆಂದು ವ್ಯಕ್ತಿ ಬಯಸುತ್ತಾನೆ.

ಬಂಗಾರದಲ್ಲಿ ನವರತ್ನಗಳನ್ನು ಅಳವಡಿಸಿ ಧರಿಸಿದಾಗ ಅದರಿಂದ ಪಡೆಯುವ ಶಕ್ತಿಯೇ ಬೇರೆ. ತುಲನೆ ಮಾಡಲು ಸಾಧ್ಯವಿಲ್ಲದಂತಹ ಆತ್ಮಸ್ಥೈರ್ಯ ನಮ್ಮಲ್ಲಿ ಉಂಟಾಗುತ್ತದೆ.

ನವರತ್ನ ಸರ, ಹಾರ, ಉಂಗುರ, ನೆಕ್ಲೇಸ್, ಬಳೆ, ಓಲೆ... ಹೀಗೆ ಎಲ್ಲ ರೀತಿಯ ಆಭರಣಗಳೂ ಸಾಂಪ್ರದಾಯಿಕ ಹಾಗೂ ಫ್ಯಾಷನೆಬಲ್ ಆಗಿರುತ್ತವೆ. ಧರಿಸಿಕೊಳ್ಳಲು ಹಗುರ ಹಾಗೂ ಸಖತ್ ಲುಕ್ ಕೊಡುವಂಥದ್ದು. ಕಣ್ಣಿಗೆ ಒಪ್ಪುವಂತಹ, ಬೇರೆ ಯಾವುದೇ ರೀತಿಯ ಒಡವೆ ಹಾಕದಿದ್ದರೂ ಗ್ರ್ಯಾಂಡ್ ಆಗಿಯೇ ಕಾಣುವಂತಹ ನವರತ್ನ ಆಭರಣಗಳು ಮಹಿಳೆಯರ ಮೆಚ್ಚು ಕೂಡ ಹೌದು.

ನವರತ್ನದ ಹಲವು ವೈವಿಧ್ಯದ ಬಗೆಗಿನ ಅವಲೋಕನ ಇಲ್ಲಿದೆ.

### ನವರತ್ನ ಹರಳಿನ ಸುತ್ತಿದ ಸರ

ಈ ಸರವನ್ನು ಉದ್ದ ಸರವಾಗಿಯೂ ಬಳಸಬಹುದು. ಸಣ್ಣ ನೆಕ್ಲೇಸ್ ಆಗಿಯೂ ಬಳಸಬಹುದು. ಎರಡು ಸುತ್ತಿನ ಸುಂದರ ಸರವಾದ ಇದು ಹರಳು ಸಂಪೂರ್ಣವಾಗಿ ಇದ್ದು ದಪ್ಪಗಿನ ಸರಿಗೆಯಲ್ಲಿ ಸುತ್ತಿರುವುದರಿಂದ ಭದ್ರವಾಗಿರುತ್ತದೆ. ಹಿಂದೆ ರಿಂಗ್ ಚೈನ್ ಅಳವಡಿಸಬಹುದು. ಧೋರಿ ಕೂಡ ಹಾಕಬಹುದು. ಧೋರಿ ಎಂದರೆ ನೂಲಿನಿಂದ ಕೂಡಿದ ಹುಕ್ ಅನ್ನು ಹೊಂದಿದ್ದ ಹಿಂದಿನ ಭಾಗ. ಹುಕ್ ಚಿನ್ನದ್ದೇ ಇರಲಿ. ಸಾಧಾರಣವಾಗಿ ಆರ್ಟಿಫೀಶಿಯಲ್ ಬರುತ್ತದೆ. ಅದನ್ನು ಬದಲಿಸಿದರೆ ಒಳ್ಳೆಯದು. ನವರತ್ನದ ಹರಳು ಗುಂಡಗೆ, ಅಂಡಾಕಾರ ಎಲ್ಲಾ ಆಕಾರದಲ್ಲೂ ಬರುತ್ತದೆ. ಗಮನಿಸಬೇಕಾದ ಅಂಶವೆಂದರೆ ಪ್ರತಿಯೊಂದು ಹರಳುಗಳೂ ಒಂದೇ ಆಕಾರ, ಒಂದೇ ಗಾತ್ರದಲ್ಲಿದ್ದು ಸರವನ್ನು ಪೋಣಿಸಬೇಕು.

### ಎರಡೆಳೆಯ ಮಾಣಿಕ್ಯ, ಮುತ್ತಿನ ಮಾಲೆ

ಎರಡು ಎಳೆಯಲ್ಲಿ ಒಪ್ಪ ಓರಣವಾಗಿ ವಿಭಿನ್ನವಾಗಿ ರೂಬಿ ಮತ್ತು ನೈಸರ್ಗಿಕ ಮುತ್ತನ್ನು ಹೊಂದಿಕೊಳ್ಳುವಂತೆ ಜೋಡಿಸಲಾಗಿದೆ. ಸಣ್ಣ ಚಿನ್ನದ ಕವರನ್ನು ಈ ಹರಳುಗಳಿಗೆ ಅಳವಡಿಸಬೇಕು. ಹರಳಿನ ಬಣ್ಣ ಕಾಣುವಂತಿರಬೇಕು. ಇಲ್ಲವಾದಲ್ಲಿ ಹರಳಿನ ಮೌಲ್ಯ ಕಳೆದುಕೊಂಡಂತೆ ಎರಡು ಸುತ್ತಿನ ಮಾಲೆಯಲ್ಲಿ ಬಹು ಪ್ರಾಮುಖ್ಯವಾದುದ್ದು. ಅಂದರೆ ಇದು ಮೋಪ್ ಆಗಿರಬೇಕು. ಎರಡು ಎಳೆಯ ಸರವು ಯುವತಿಯ ಸೌಂದರ್ಯವನ್ನು ಹೆಚ್ಚಿಸಬೇಕಾದರೆ ಸೊಗಸಾಗಿ ಶೋಭಿಸಬೇಕು ಈ ಎರಡು ಎಳೆಗಳು ಅಚ್ಚುಕಟ್ಟಾಗಿ ನಿಲ್ಲಬೇಕಾದರೆ ಮೋಪ್ ಪದಕ ಅಗತ್ಯ. ಎರಡೂ ಎಳೆಯನ್ನು ಇದರ ಸಹಾಯದಿಂದ ಅಳವಡಿಸಿದಾಗ ಸರ ನೈಜವಾಗಿ ಚೆನ್ನಾಗಿ ಶೋಭಿಸುತ್ತದೆ. ಮೋಪ್ ಇಲ್ಲದ ಸರದ ಎಳೆಗಳು ಒಂದರ ಮೇಲೊಂದು ಬಿದ್ದು ಚೆನ್ನಾಗಿ ಕೂರುವುದಿಲ್ಲ. ಅದುವೇ ಮೋಪ್ ಇದ್ದ ಸರದ ವಿಶೇಷತೆ.

### ಅನ್‌ಕಟ್ ಚಪ್ಪಟೆ ಸರ

ಕೆತ್ತನೆ ಇಲ್ಲದ ಹರಳುಗಳೂ ಅಂದವಾಗಿರುತ್ತವೆ. ಅದನ್ನು ಪೋಣಿಸುವುದರಲ್ಲಿ ಅಡಗಿದೆ ಅದರ ಅಂದ. ಇದು ಆಧುನಿಕ ಬಟ್ಟೆಗಳಿಗೂ, ಚೂಡಿದಾರ ಮುಂತಾದ ಬಟ್ಟೆಗಳಿಗೂ ಸೂಪರ್ ಆಗಿ ಹೊಂದಿಕೊಳ್ಳುತ್ತದೆ. ಸೀರೆಗೂ ಸೊಗಸಾಗಿರುತ್ತದೆ. ಇಂತಹ ಸರಗಳನ್ನು ಧರಿಸುವಾಗ ಒಂದೇ ಹಾರವನ್ನು ಧರಿಸಬೇಕು. ತಿಳಿ ಬಣ್ಣದ ಬಟ್ಟೆಗೆ ಬಹಳ ಹೊಂದುತ್ತದೆ. ಏಕೆಂದರೆ ಇದರಲ್ಲಿ ಎಮರಾಲ್ಡ್, ರೂಬಿ, ನೀಲ.. ಹೀಗೆ ಬಣ್ಣ ಬಣ್ಣದ ಹರಳುಗಳು ಚಪ್ಪಟೆಯಾಗಿರುವುದರಿಂದ ನೀಟಾಗಿ ಅಂದವಾಗಿ ಜೋತು ಬೀಳದಂತೆ ಕೂರುತ್ತದೆ. ಇದರ ತುದಿಗಳನ್ನು ನುಣ್ಣನೆ ಸಪಾಯಿ ಮಾಡಿರಬೇಕು. ಅಂಚನ್ನು ಚಿನ್ನದ ತಗಡಿನಿಂದ ಸುತ್ತಿ ಕವಚ ಇದ್ದಾಗ ನೋಡಲು ಸೊಗಸಾಗಿರುತ್ತದೆ. ಹರಳನ್ನೇ ತೂತು ತೆಗೆದು ಜೋಡಿಸಿದರೆ ಹರಳುಗಳು